# ಡಕಾಯಿತನೇ ಮಾರ್ಗದರ್ಶಕನಾದಾಗ

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**



ಕಾಠಿಯಾವಾಡ – ಇಂದಿನ ಸೌರಾಷ್ಟ್ರದ ಆಗಿನ ಸಮಯ. ಶೀತಲ ಋತು– ಜೋರಾದ ಗಾಳಿ ಬೀಸಿ ಥಂಡಿಯಾಗುತ್ತಿತ್ತು. ಆ ವರ್ಷ ಅದೇಕೋ ಶೀತಗಾಳಿಯು ಒಂದೇ ಸಮನೆ ಬೀಸುತ್ತಿತ್ತು. ಪರಿವ್ರಾಜಕ ಸಂನ್ಯಾಸಿ ಕಾಠಿಯಾವಾಡ  ಪ್ರದೇಶದಲ್ಲಿ ಸುತ್ತಾಡುತ್ತಿದ್ದ. ಕಾಠೀ ರಾಜ್ಯದ ಬಾವರಾದಿಂದ ಮುಂದೆ ಸಾಗಿ ಅಲ್ಲಿದ್ದ ಒಂದು ಸಣ್ಣ ಹಳ್ಳಿಯಲ್ಲಿ ವಿಚಾರಿಸಿದಾಗ ಹಳ್ಳಿಗರು ಒಂದು ಸಣ್ಣ, ಹತ್ತಿರದ ದಾರಿಯನ್ನು ಹೇಳಿದರು. ಆದರೆ ಅದು ಕಾಡಿನ ಕಡೆಯಿಂದ ಹೋಗಿ ಘೇಲಾ ಸೋಮನಾಥವನ್ನು ತಲುಪುತ್ತಿತ್ತು. ಆ ದಾರಿಯೇ ಐತಿಹಾಸಿಕ ರಮ್ಯ ಸ್ಥಳವಾದ ಘೇಲಾ ಸೋಮನಾಥ. ಹಿಂದೆ ಮಹಮ್ಮದ್ ಗಜನಿ ಕಡೆಯ ಬಾರಿ ಸೋಮನಾಥವನ್ನು ಲೂಟಿ ಮಾಡಿದಾಗ, ಕೆಲವು ಪೂಜಾರಿಗಳು ಓಡಿ ಹೋಗಿ ಈ ಕಾಡಿನಲ್ಲಿ ಅವಿತುಕೊಂಡಿದ್ದರು. ಆಮೇಲೆ ಸುಮಾರು ವರ್ಷಗಳ ನಂತರ ಜಸದನ್‌ನ  ರಾಜ ಸೋಮನಾಥ ಮಂದಿರದ ಸ್ಥಾಪನೆಯನ್ನು ಮಾಡಿದ. ಆದರೆ ಘೇಲಾ ಯಾಕೆ? ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ, ಇಲ್ಲಿ ಆ ಚರ್ಚೆಯ ಆವಶ್ಯಕತೆ ಇಲ್ಲ.

ಕಾಡಿನಲ್ಲಿ ದಿನ ಬಹಳ ಬೇಗ ಕಳೆದು ಹೋಗುತ್ತದೆ. ಸಂಜೆಯಾಯಿತು ಆದರೆ ಹುಣ್ಣಿಮೆ ಇತ್ತು, ಒಂದು ರುದ್ರ ಗಂಭೀರ ಅರಣ್ಯದ ವಾತಾವರಣ. ಜನಸಂಚಾರದ ಕುರುಹೂ ಇಲ್ಲ. ಹತ್ತಿರದಲ್ಲಿ ಯಾವುದೇ ಹಳ್ಳಿ ಅಥವಾ ಗುಡಿಸಲು ಕಾಣುತ್ತಲೂ ಇಲ್ಲ. ಸಂನ್ಯಾಸಿ ದಾರಿ ತಪ್ಪಿಬಿಟ್ಟಿದ್ದ. ಕಾಡಿನ ಹಾದಿಯಲ್ಲಿ ಚಿಂತಾಕ್ರಾಂತನಾಗಿ ಮುಂದೆ ಸಾಗುತ್ತಿದ್ದ. ಬಾಯಾರಿಕೆಯಾಗುತ್ತಿತ್ತು, ಆದರೆ ನೀರಿರಲಿಲ್ಲ.

ಸಾಗುತ್ತಾ ಸಾಗುತ್ತಾ ಅವನು ಯೋಚಿಸುತ್ತಿದ್ದ, ಎಲ್ಲಾದರೂ ನೀರು ಸಿಕ್ಕಿದರೆ ಅಲ್ಲೇ ಇವತ್ತು ರಾತ್ರಿ ಉಳಿದುಬಿಡುತ್ತೇನೆ. ಬೆಂಕಿಪೊಟ್ಟಣ ಹೇಗಿದ್ದರೂ ಬಳಿಯಲ್ಲಿ ಇದೆ; ಈ ಕಾಡಿನಲ್ಲಿರುವ ಒಣಗಿದ ರಾಶಿ ತರಗೆಲೆಗಳನ್ನು ಒಟ್ಟು ಮಾಡಿ ಬೆಂಕಿ ಕಾಯಿಸಿಕೊಂಡು ರಾತ್ರಿಯನ್ನು ಕಳೆದುಬಿಡುತ್ತೇನೆ ಎಂದು ಯೋಚಿಸುತ್ತಿದ್ದ. ರಾತ್ರಿ ಬಹಳಷ್ಟು ಆಗಿತ್ತು. ಎಲ್ಲೆಡೆ ಸ್ಮಶಾನ ಮೌನ, ಕಾಡಿನ ಪ್ರಾಣಿಗಳ ಶಬ್ದವೂ ಕೇಳುತ್ತಿಲ್ಲ.. ಗಂಭೀರವಾದ ನಿಶ್ಶಬ್ದ ಹೆದರಿಕೆ ಹುಟ್ಟಿಸುವಂತಿತ್ತು. ಆಗ ಯಾರೋ ಮನುಷ್ಯರು ಬರುತ್ತಿರು

ವಂತೆ ಭಾಸವಾಯಿತು. ಆಹಾ! ಒಳ್ಳೆಯದಾಯಿತು, ಸಮೀಪದಲ್ಲೇ ಹಳ್ಳಿಯೊಂದು ಇರಬೇಕು ಎಂದುಕೊಂಡ.

ಆರಡಿ ಎತ್ತರದ ಒಬ್ಬ ಕಟ್ಟುಮಸ್ತಾದ ಆಸಾಮಿ; ತಲೆಯ ಮೇಲೆ ಕಾಠಿಯಾವಾಡದ ದೊಡ್ಡ ಪಗಡಿ ಇತ್ತು, ಮತ್ತು ಕೈಯಲ್ಲಿ ಬಂದೂಕು ಹಿಡಿದು ಎದುರಿನಲ್ಲಿ ಬರುತ್ತಿದ್ದ. ಸನ್ಯಾಸಿಯನ್ನು ದೂರದಿಂದಲೇ ನೋಡಿ ಕೇಳಿದ, ''ಯಾರಿದ್ದೀರಿ?...'' ಪ್ರತ್ಯುತ್ತರವಾಗಿ ಸಂನ್ಯಾಸಿಯೂ ನೇರವಾಗಿ ಕೇಳಿಬಿಟ್ಟ: '' ನೀನ್ಯಾರು? '' ಅಂತ. ಅವನು ತಕ್ಷಣ ಬಂದೂಕನ್ನು ಎತ್ತಿಬಿಟ್ಟ. ಸಂನ್ಯಾಸಿಗೆ ಅರಿವಾಗಿ ಹೋಯಿತು, ತಾನು ತಪ್ಪು ಮಾಡಿದೆ ಎಂದು. ನೇರವಾಗಿ ಆ ರೀತಿ ಕೇಳುವುದು ಸವಾಲೆಸೆದ ಹಾಗೆಯೇ. ಈಗೇನು ಮಾಡುವುದು? ಅವನಿಗೆ ಭಯವೇನೋ ಆಯಿತು, ಆದರೆ ಒಂದು ಜಾಣತನದ ಉಪಾಯ ಮಾಡಿದ. ''ಅರೆ ಅಣ್ಣಾ , ಹತ್ತಿರ ಎಲ್ಲಾದರೂ ನೀರು ಸಿಗಬಹುದೇ, ನೀರು?'' ಎಂದು ಜೋರಾದ ಧ್ವನಿಯಲ್ಲಿ ಕೇಳುತ್ತಾ, ಆ ವ್ಯಕ್ತಿಯ ಹತ್ತಿರಕ್ಕೇ ಹೆಜ್ಜೆ ಹಾಕುತ್ತ ನಡೆದ. ಆ ವ್ಯಕ್ತಿ ಇವನನ್ನು ನೋಡಿದ, ಮಲಿನವಾದ ವಸ್ತ್ರಗಳು, ಒಂದು ಮಾಮೂಲಿ ಕೋಲಿನ ಹೊರತು ಕೈಯಲ್ಲಿ ಬೇರೆ ಯಾವುದೇ ಆಯುಧವಿಲ್ಲ. ಆ ವ್ಯಕ್ತಿ ಬಂದೂಕನ್ನು ಕೆಳಗಿಳಿಸಿದ.

ಸಂನ್ಯಾಸಿ ಕೇಳಿದ, ''ಅಣ್ಣಾ, ಸಮೀಪದಲ್ಲಿ ಯಾವುದಾದರೂ ಹಳ್ಳಿ ಇದೆಯೆ? ತುಂಬ ಬಾಯಾರಿಕೆ, ನೀರು ಬೇಕು. ಮತ್ತು ರಾತ್ರಿ ಉಳಿದುಕೊಳ್ಳಲು ಜಾಗವೂ ಬೇಕು...''

''ಇಲ್ಲ, ಹತ್ತಿರ ಯಾವುದೂ ಹಳ್ಳಿ ಇಲ್ಲ. ಹತ್ತಿರದ ಒಂದು ಮೈಲಿಯ ದೂರದಲ್ಲಿ ರೈತರ ಒಂದು ಸಣ್ಣ ಬಸ್ತಿ ಇದೆ. ನೀರು ನಿನಗೆ ಅಲ್ಲೇ ಸಿಗುತ್ತದೆ. ಆದರೆ ಇಲ್ಲಿ ಎಲ್ಲಿ ಹೋಗುತ್ತಿದ್ದೀಯಾ? ''

''ಘೇಲಾ ಸೋಮನಾಥಕ್ಕೆ ಹೋಗಬೇಕು. ಈ ರಸ್ತೆ ಹತ್ತಿರ ಆಗುತ್ತದೆ ಎಂದು ಯಾರೋ ಹೇಳಿದರು, ಹಾಗಾಗಿ ಹೀಗೆ ಬಂದೆ. ಆದರೆ..''

''ರಸ್ತೆ ತಪ್ಪಿ ಬಂದಿದ್ದೀಯ. ಇಲ್ಲಂತೂ ಕಾಡೇ ಕಾಡು. ರೈತರ ಆ ಹಳ್ಳಿ ಸ್ವಲ್ಪವೇ ಹತ್ತಿರದಲ್ಲಿದೆ. ನಂತರ ಅಲ್ಲಿಂದ ಘೇಲಾ ಸೋಮನಾಥವೂ ಹತ್ತಿರವೇ. ಈ ಹಾದಿಯನ್ನು ಹಿಡಿದುಕೊಂಡು ಹೊರಟುಬಿಡು ಅಲ್ಲಿ ಹಳ್ಳಿ ಸಿಗುತ್ತದೆ.''

''ಅರೆ ಭಾಯಿ, ನನಗಂತೂ ಯಾರ ಪರಿಚಯವೂ ಇಲ್ಲ, ಏನೂ ಗೊತ್ತಿಲ್ಲ. ಮತ್ತೆ ಏನಾದರೂ ಅಲ್ಲಿ ಇಲ್ಲಿ ಹೊರಟು ಹೋದರೆ ತುಂಬಾ ಕಷ್ಟವಾಗುತ್ತದೆ. ನೀನೇ ದಯವಿಟ್ಟು ಈ ರಸ್ತೆಯಿಂದ ನನ್ನನ್ನು ಮುಟ್ಟಿಸಿಬಿಡು, ತುಂಬಾ ಸಹಾಯವಾಗುತ್ತದೆ.''

ಸ್ವಲ್ಪ ಸಮಯ ಅವನು ಮೌನವಾಗಿ ವಿಚಾರ ಮಾಡಿ ನಂತರ ''ಸರಿ, ನಡಿ'' ಎಂದ; ಮತ್ತು ಸಂನ್ಯಾಸಿಯನ್ನು ಮುಂದಿಟ್ಟುಕೊಂಡು ಹಿಂದೆ ಬಂದೂಕನ್ನು ಮೆಲ್ಲಗೆ ಇಟ್ಟುಕೊಂಡು ರಸ್ತೆಯನ್ನು ತಿಳಿಸುತ್ತಾ ನಡೆದ. ಹಳ್ಳಿಯ ಹತ್ತಿರವೇ ಒಂದು ನದಿ ಇತ್ತು. ಅದರಲ್ಲಿ ಜುಳುಜುಳು ಎಂದು ನೀರು ಹರಿಯುತ್ತಿತ್ತು. ಅವನೆಂದ, ''ಅದೇ ಹಳ್ಳಿ. ನೀರು ಕುಡಿದು ಹಳ್ಳಿಯ ವೃತ್ತದಲ್ಲಿ ಅತಿಥಿಗೃಹವಿದೆ, ಅಲ್ಲೇ ಉಳಿದುಕೋ, ಹೊರಗೆ ಅಪಾಯ'' ಎಂದ.

ಸಂನ್ಯಾಸಿ, ''ಆದರೆ ಭಾಯಿ, ರಾತ್ರಿಯ ಸಮಯ ಮತ್ತು ನಾನೂ ಅಪರಿಚಿತ. ನನಗೆ ಅತಿಥಿಗೃಹದಲ್ಲಿ ಯಾರು ಜಾಗ ಕೊಡುತ್ತಾರೆ? ಎಲ್ಲರೂ ನಿದ್ರೆ ಮಾಡುತ್ತಿರುತ್ತಾರೆ. ನಾಯಿಗಳೂ ಬೊಗಳುತ್ತಾ ನನ್ನ ಮೇಲೆ ಏರಿಬಿಡುತ್ತವೆ'' ಎಂದು ಅಂಗಲಾಚಿದ. ಆ ವ್ಯಕ್ತಿ ಮತ್ತೆ ಸ್ವಲ್ಪ ಸಮಯ ಮೌನವಾಗಿದ್ದು ನಂತರ ಹೇಳಿದ,

''ಹಳ್ಳಿಯಲ್ಲಂತೂ ನಾನು ಕಾಲಿಡುವುದಿಲ್ಲ. ನೀನು ಆ ಬದಿಯಿಂದ ಹೊರಟು ಹೋಗು. ಬಾಬರಾ ದರ್ಬಾರನ ಮಾಮಾಜಿಯವರು ಫಸಲನ್ನು ತೆಗೆದುಕೊಳ್ಳಲು ಬಂದಿದ್ದಾರೆ, ಕೊಟ್ಟಿಗೆಯಲ್ಲಿ ಉಳಿದುಕೊಳ್ಳುತ್ತಾರೆ. ನಿನಗೂ ವ್ಯವಸ್ಥೆ ಮಾಡಿಯಾರು'' ಎಂದು ಹೇಳಿ ವಿದಾಯ ಹೇಳಿ ಮತ್ತೆ ಕಾಡಿನ ರಸ್ತೆಯನ್ನು ಹಿಡಿದು ಹೊರಟುಹೋದ.

ಪರಿವ್ರಾಜಕ ಸಂನ್ಯಾಸಿ ಅವನು ಹೇಳಿದಂತೆಯೇ ಹೋದ. ಅಲ್ಲಿ ಕೊಟ್ಟಿಗೆಯಲ್ಲಿ ನಾಲ್ಕೈದು ಜನರು ಕುಳಿತು ಬೆಂಕಿಯಲ್ಲಿ ಶಾಖ ಕಾಯಿಸಿಕೊಳ್ಳುತ್ತಾ ಮಾತನಾಡುತ್ತಿದ್ದರು. ''ಓ ಅಣ್ಣಂದಿರಾ .. ಮಾಮಾಜಿ ಇದ್ದಾರಾ? ಸಂನ್ಯಾಸಿ ಒಬ್ಬ ಬಂದಿದ್ದಾನೆ, ರಾತ್ರಿ ಇಲ್ಲೇ ಉಳಿದುಕೊಳ್ಳುತ್ತಾನೆ ಎಂದು ಹೇಳಿರಿ'' ಎಂದ. ಮಾಮಾಜಿ ಅಲ್ಲೇ ಹತ್ತಿರದ ಛಾವಣಿಯಲ್ಲಿ ಚಾಪೆಯ ಮೇಲೆ ಮಲಗಿದ್ದರು. ಒಬ್ಬ ಅವರಿಗೆ ಹೋಗಿ ಹೇಳುತ್ತಲೇ ಎದ್ದರು. ನಂತರ ಇವನು ಎಲ್ಲಿಂದ ಅಲ್ಲಿಗೆ ಬಂದ, ಎಲ್ಲಿಗೆ ಹೋಗುತ್ತಿದ್ದಾನೆ, ಎಲ್ಲ ತರದ ಪ್ರಶ್ನೆಗಳನ್ನೂ ಕೇಳಿ, ಒಳಗೆ ಬರುವ ಬಾಗಿಲನ್ನು ತೆರೆಯಲು ಹೇಳಿ, ಬೆಂಕಿಯ ಹತ್ತಿರ ಕುಳಿತ ಮೇಲೆ ಕೇಳಿದರು: '' ಈ ಸ್ಥಳವನ್ನು ನಿನಗೆ ಯಾರು ತೋರಿಸಿದರು?''

ಇವನು ವರ್ಣಿಸಿದ ತಕ್ಷಣ ಹೆದರಿಕೊಂಡು ಕೂಗಾಡಲು ಪ್ರಾರಂಭಿಸಿದರು: ''ಅರೆ ಬಂದೂಕು ಹಾರಿಸಿ, ಬಂದೂಕು ಹಾರಿಸಿ... ಅವನು ಎಲ್ಲಿಗೆ ಹೋದ? ಕಾಡಿನ ಹತ್ತಿರಕ್ಕೆ ಬಂದೂಕು ಹಾರಿಸಿ ಹಾರಿಸಿ'' ಎಂದು ಕೂಗಿಕೊಂಡರು. ಆ ಜನರೆಲ್ಲ ಆಚೆ ಈಚೆ ಓಡಾಡಿ ಹೇಳಿದರು, ''ಅವನು ಒಬ್ಬ ಭಯಂಕರ ಡಕಾಯಿತ, ಬಹಳಷ್ಟು ಕೊಲೆ ಮಾಡಿದ್ದಾನೆ, ಸಿಕ್ಕಾಪಟ್ಟೆ ಲೂಟಿ ಮಾಡುತ್ತಾನೆ, ನಿಮಗೇನೂ ಹಾನಿ ಮಾಡಲಿಲ್ಲ ತಾನೆ? ''

''ಹೇ ಇಲ್ಲ ಇಲ್ಲ , ನನ್ನ ಹತ್ತಿರವಂತೂ ಏನೂ ಇಲ್ಲ. ಅವನು ಒಂದು ಮೈಲಿ ದೂರದಿಂದಲೇ ದಾರಿ ತೋರಿಸಿ, ಸ್ವಲ್ಪ ದೂರ ಬಂದು ಹೊರಟು ಹೋದ. ನಂತರ ವಿದಾಯ ಹೇಳಿ ಕಾಡಿನೊಳಗೆ ಹೋಗಿಬಿಟ್ಟ.''

ಮಾನವತೆಯ ಒಂದು ಎಳೆ ಅವನಲ್ಲೂ ಇತ್ತು. ❁